ಬಗ್ಗೆ ಕನಿಕರದಿಂದೆಂಬಂತೆ ನೋಡಿದ ತಿಮೋತಿ. ಆದರೆ ಆತ ಎಲ್ಲರಿಗೂ ಬೇಕಾದ ಮನುಷ್ಯ. ಪರಿಗಣಿಸಲೇಬೇಕಾದಷ್ಟು ಗಂಭೀರವೂ ಅಲ್ಲದ, ನಿರ್ಲಕ್ಷಿಸಬಹುದಾದಷ್ಟು ತೆಳುವೂ ಅಲ್ಲದ ಪತ್ರಿಕೆಗಳಲ್ಲಿ ಬರಹ, ಫೋಟೊಗಳು ಬಂದು ಬಂದು ಸಮಾಜದಲ್ಲೀಗ ಗಣ್ಯತೆ ಪಡೆದುಕೊಂಡುಬಿಟ್ಟಿರುವ ಎಡಬಿಡಂಗಿ ವರ್ಗದ ನಿರುಪದ್ರವಿ ಲೇಖಕ.

‘ಆಯ್ತು ತಗಳ್ರಿ. ಅವಶ್ಯ ನೋಡ್ತೀನಿ. ನಿಮ್ದು ಒಂದು ಫೋಟೊ ಕೊಟ್ಟಿರ್ರಿ ಇದೇ ವಾರ ಹಾಕಮು ಅದ್ರಾಗೇನಾದ’ ಅಂದ ತಿಮೋತಿ, ತಾನು ಈ ವಾರ ಸಾಪ್ತಾಹಿಕ ಪುರವಣಿಯನ್ನೇ ಕೈ ಬಿಡಬೇಕೆಂದುಕೊಂಡನ್ನು ನೆನಪಿಸಿಕೊಂಡೇ.

‘ಹೆ ಹೆ ಹೆ’ ಅಂದು ‘ಆಗ್ಲಿ ಸಾಬ್ರೆ ಅದ್ರಾಗೇನಾದ. ಸಂಜಿಕೇ ತಂದು ಕೊಡ್ತೀನಿ’ ಎನ್ನುತ್ತ ಹುಸಿಸೌಜನ್ಯದ ನಗೆ ಬೀರಿದರು ಖುಷಿಯಿಂದ ಕೈ ಮುಗಿಯುತ್ತ ಮೂಲಿಮನಿ ಮಲ್ಲಪ್ಪನವರು. ಶೇಖ್ ಹುಸೇನ್ ಖಾನಾಪುರ ಮಾತ್ರ ಎಂದಿನ ಬಿಗುವಿನಲ್ಲೇ ಇದ್ದರು. ಅದು ಅವರ ಸ್ವಭಾವ. ಜ್ಞಾನಪೀಠಕ್ಕೆ ಕೂಗಳತೆಯ ಹತ್ತಿರದಲ್ಲಿರುವ ಲೇಖಕ ತಾವೆಂಬ ಹಮ್ಮು ಅವರಿಗೆ ಹುಟ್ಟಿನಿಂದಲೇ ಬಂದಿದೆ. ಪದವಿ ಕಾಲೇಜೊಂದರ ಪ್ರಿನ್ಸಿಪಾಲರವರು. ಮೇಲಾಗಿ ಲಕ್ಷಾಂತರ ಕಮಾಯಿಯ ಚೀಟಿ ವ್ಯವಹಾರಗಳು. ಈ ಊರಿಗೆ ಯಾವ ದೊಡ್ಡ ಸಾಹಿತಿ ಬಂದರೂ ಇವರ ಪದ ಹಾಡಿ, ಇವರ ಆತಿಥ್ಯ ಸ್ವೀಕರಿಸಿ ಹೋಗೋದು ಒಂದು ಸಂಪ್ರದಾಯ. ಅವರ ಆತಿಥ್ಯದ ಆಳದಲ್ಲಿ ಇರುವುದು ಮಾತ್ರ ಉಣಿಸಿದೆನೆಂಬ ಅಹಂಕಾರವೇ ಹೊರತು ತಣಿಸಿದೆನೆಂಬ ತೃಪ್ತಿಯಲ್ಲ. ಅಷ್ಟರಲ್ಲಿ ಬಂದ ಅಬ್ದುಲ್ ‘ಅಸ್ಸಲಾಂ ವಾಲೆಕುಂ ಸರ್’ ಅಂದ.

‘ವಾಲೆಕುಂ ಅಸ್ಸಲಾಂ. ಏನ್ ನಡೆಸೀರಿ ಅಬ್ದುಲ್?’ ಎಂದರು ಶೇಖ್ ಸಾಬರು ಗತ್ತಿನಲ್ಲಿ.

‘ಅಂತಾ ಖಾಸೇನಿಲ್ಲ ಸರ್. ಸಣ್ಣ ಪ್ರಮಾಣದ ಪರಿಹಾರ ಕಾರ್ಯಕ್ಕ ಹೊಂಟೇವ್ರಿ. ಬರ್ರಿ ಸರ್ ನೀವೂ ಫ್ರೀ ಇದ್ರೆ. ಈ ಸಮಾಜಕ್ಕೆ ತಮ್ಮಂಥ ಲೇಖಕರ ಕೊಡುಗೆ ಬೇಕು ಸರ್’

ಬುಡಕ್ಕೆ ಬತ್ತಿ ಇಟ್ಟಂತಾಯಿತು ಸಾಬರಿಗೆ. ಎದುರಿಗಿದ್ದ ಅಬ್ದುಲ್‌ನ ಹೆಗಲ ಮೇಲೆ ನಿಡಿದಾಗಿ ಕೈ ಹಾಕಿ ‘ಲೇಖಕರ ಸಾಮಾಜಿಕ ಜವಾಬ್ದಾರಿ, ಸಾಮಾಜಿಕ ಕಳಕಳಿ ಅಂಬವೆಲ್ಲ ಒಂದು ತೋರುಗಾಣಿಕೆಯ ಸರಕುಗಳು. ನಿಜವಾದ ಲೇಖಕ ತನ್ನ ರೈಟಿಂಗ್ ಮೂಲಕ ಬದುಕಿಗೆ ಕನ್ನಡಿ ಹಿಡುದ್ರೆ ಸಾಕು. ಇದೆಲ್ಲ ಬುಲ್ ಶಿಟ್. ನಾನು ನಂಬಂಗಿಲ್ಲ”

‘ಇರ್ಲಿ ಬುಡ್ರಿ ಸರ್. ರೈಟರೇ ಅಂತಲ್ಲ. ಒಬ್ರಿಗೊಬ್ರು ಆಸರಾದ್ರೆ ಎಷ್ಟೋ ಅನುಕೂಲ ಆಗುತ್ತ ಅಂತ’

‘ಅದು ಕರೆಕ್ಟ್. ನಾವೂ ನಮ್ ಕೈಲಾದ ಸಹಾಯ ಮಾಡೀವಿ. ಹೇಳಿಕೆಳದಿಲ್ಲ ಅಷ್ಟೆ’

‘ಆಯ್ತು ಬುಡ್ರೀ ಸರ್. ಕರೆಕ್ಟ್ ಇದ್ದೋರಿಗೆ ಕೊಡ್ರಿ ಸರ್ ಅಷ್ಟೆ. ಮಳೆ ಹೆಸರಿನ್ಯಾಗ ರೊಕ್ಕ ಹುಟ್ಟುತ್ತಂತ ಎಲ್ಲ ನಮೂನಿ ಮಂದಿ ಎದ್ದು ಕುಂತಿರುತ್ತ. ಇದು ಗಣಪತಿ ಹಬ್ಬದ ಪಟ್ಟಿ ಇದ್ದಂಗ. ಕೊಟ್ಟಿಲ್ಲಂದ್ರೆ ಕೆಟ್ಟವರನ್ನ ಮಾಡ್ತಾರ. ಆದ್ರೆ ಕುಂದ್ರುಸೋರ್‍ಯಾರೋ, ಕುಡುದು ಖಲಾಸ್ ಮಾಡೋರ್‍ಯಾರೋ ಗೊತ್ತಾಗದಿಲ್ಲ’ಎಂದ ಬಾಲಕೃಷ್ಣ ಮಧ್ಯೆ ತೂರಿಕೊಂಡು. ಶೇಖ್ ಸಾಹೇಬರಿಗೆ ಅವನನ್ನು ನೋಡಿ ಉತ್ಸಾಹದ ಭರದಲ್ಲಿ ಹುಡುಗುತನದ ಮಾತುಗಳನ್ನು ಜಾರಿಸಿಬಿಡುವ ಹುಂಬ ಅನಿಸಿತು. ಉದ್ದೇಶದ ಒಳಿತಿಗಿಂತ ಪರಿಣಾಮದ ಕೆಡುಕಿನ ಬಗ್ಗೆ ಜನ ಹೆಚ್ಚು ಪರ್ಟಿಕ್ಯುಲರ್ ಆಗಿರುತ್ತಾರೆ ಎಂದು ತಿಳಿಸಿ ಹೇಳಿದರೂ ತನ್ನ ಉತ್ಸಾಹದ ಉಡಾಫೆಯಲ್ಲಿ ಅದನ್ನು ತೇಲಿಸಿಬಿಡುವ ವ್ಯಕ್ತಿಯಂತೆ ಅವನನ್ನು ಅವರು ಗ್ರಹಿಸಿದರು. ಹಾಗಾಗಿ ಅಬ್ದುಲ್ಲನ ಕಡೆ ತಿರುಗಿ ‘ಸುಜಾವುದ್ದೀನ್ ಬಂದಿದ್ದ, ಮಾರುತಿ ಓಮ್ನಿ ತಗಂಡು. ಸರ್ ಮಳೆ ಸಂತ್ರಸ್ತ ಜನರಿಗೆ ನಿಮ್ಮ ಕಡೆಲಿಂದ ಹಾಸಿಗಿ, ಬಟ್ಟೆ ಬರೆ ಏನನ್ನ ಇದ್ರೆ ಕೊಡ್ರಿ ಸರ್. ಹೆಲ್ಪ್ ಆಗ್ತದ ನಾವೇ ಹೋಗಿ ಹಂಚಿ ಬರ್ತೀವಿ ಅಂದ. ನಮ್ಮ ಮನೆಯಿಂದ ಸುಮಾರು ಹತ್ತು ಜತೆ ಬಟ್ಟೆ, ಎರಡು ಬೆಡ್‌ಶೀಟ್.. ದೊಡ್ಡ ಗಂಟೇ ಕಳಿಸಿಕೊಟ್ಟೇವಿ..’ ಎಂದರು.

ತಿಮೋತಿ ಇನ್ನು ಸಾಕು ಎಂದು ಸೂಚಿಸುವಂತೆ ಅಬ್ದುಲ್ಲನ ಬೆನ್ನ ಮೇಲೆ ಕೈಹಾಕಿ ಅದುಮುವುದಕ್ಕೂ ಡ್ರೈವರ್ ಜೋರಾಗಿ ಹಾರ್ನ್ ಮಾಡಿ ಕರೆಯುವುದಕ್ಕೂ ಸರಿಹೋಯಿತು. ರಸ್ತೆ ಮೇಲೆ ಬಸ್ಸುಗಳ ಸಂಚಾರವಿರದೆ ಬಿಕೋ ಎನ್ನುತ್ತಿತ್ತು. ಮುಖ್ಯರಸ್ತೆಯಿಂದ ಮಂಜಾಪುರದ ಕಡೆ ತಿರುಗಿ ಅರ್ಧ ದಾರಿ ಹೋದ ಮೇಲೆ ನೋಡ್ತಾರೆ ಮಂಜಾಪುರದ ಕೆರೆ ಒಡ್ಡು ಒಡೆದು ರಸ್ತೆ ಬಂದಾಗಿತ್ತು. ನಿರ್ವಾಹವಿಲ್ಲದೆ ಮತ್ತೆ ವಾಪಸು ಬಂದು ಮುಖ್ಯ ರಸ್ತೆಗೆ ಸೇರಿಕೊಂಡಾಗ ಹಿಂದಿನಿಂದ ಕಂದಾಯ ಇಲಾಖೆಯ ಗಾಡಿ ಬಂತು. ಅದರಲ್ಲಿಯ ಡ್ರೈವರ್‌ಗೆ ಮಂಜಾಪುರದ ಕೆರೆ ಒಡೆದ ವಿಷಯ ಮೊದಲೇ ಗೊತ್ತಿತ್ತಂತ ಕಾಣ್ತದೆ ಅವನು ಒಳಗಡೆಗೆ ತಿರುಗದೆ ನೇರ ಬಂದು ‘ಯಾರದೀ ಗಾಡಿ?’ ಎಂಬಂತೆ ಇವರ ಗಾಡಿಯೊಳಗಿಣುಕಿದ. ಆ ಗಾಡಿಯಲ್ಲಿ ಕುಳಿತಿದ್ದ ನಾಗರಾಜ್ ಮಾಸ್ತರ ಅಬ್ದುಲ್ಲಾಗೆ ವಿಶ್ ಮಾಡಿದ. ಅವರ ಗಾಡಿಯಲ್ಲಿ ಬಿಸಿಲೂರಿನಿಂದಲೇ ಮಾಡಿಕೊಂಡು ತಂದ ಚಿತ್ರಾನ್ನದ ಪ್ಯಾಕೆಟ್‌ಗಳಿದ್ದವು. ಮೂರು ಊರುಗಳ ಶಾಲೆಗಳಲ್ಲಿ ವ್ಯವಸ್ಥೆ ಮಾಡಲಾಗಿರುವ ಪುನರ್ವಸತಿ ಕೇಂದ್ರಗಳಿಗೆ ಅವನ್ನು ಇಳಿಸಿಬರುವ ಕೆಲಸದ ಮೇಲೆ ಅವರು ಹೊರಟಿದ್ದರು. ‘ಒಲ್ಲೆಂದರೂನು ಒತ್ತಾಯ ಮಾಡಿ ಡ್ಯೂಟಿಗೆ ತಗಂಡಾರ್ರಿ. ಸಾಕ್ಸಾಕಾಗ್ಯಾದ. ದಿನಾ ಎರಡು ಟ್ರಿಪ್ ಬಂದು ಹೋಗ್ಬೇಕು’ ಅಂತ ಪರಿಚಯದ ಸಲುಗೆಯಲ್ಲಿ ಅಬ್ದುಲ್ಲನೊಂದಿಗೆ ಹೇಳಿಕೊಂಡು ಆ ಮಾಸ್ತರ ಪೇಚಾಡಿದ ಮೇಲೆ ಅವರ ಗಾಡಿಯನ್ನು ಹಿಂದಿಕ್ಕಿ ಇವರು ಹೊರಟರು.

ಮುಲ್ಲಾಬಾದಿ ಎಂಬ ಸ್ವಲ್ಪ ದೊಡ್ಡ ಊರಿನ ಹತ್ತಿರ ಇನ್ನೇನು ತಿರುಗಿಕೊಳ್ಳಬೇಕು ಸಹಮತದ ಬಾಲಕೃಷ್ಣ ಒಂದೆರಡು ನಿಮಿಷಗಳಿಗಾಗಿ ಅರ್ಜೆಂಟ್ ನಿಲ್ಲಿಸಬೇಕೆಂದು ಒಂದೇ ಸಮ ಒತ್ತಾಯಿಸತೊಡಗಿದ. ಇಳಿದು ದಡಬಡನೆ ಓಡಿಹೋದವನು ಐದ್ಹತ್ತು ನಿಮಿಷಗಳ ನಂತರ ನಿರಾಳವಾಗಿ ಬಂದು ನಿಧಾನವಾಗಿ ಒಳಗೆ ಹತ್ತಿದ. ತಿಮೋತಿ ತಡೆಯಲಾಗದೆ ಕೇಳಿಯೇಬಿಟ್ಟ.

‘ಏನ್ಸಾರ್ ಎಲ್ಲಿಗೋಗಿದ್ರಿ? ಹೇಳಿದ್ರೆ ನಾವೂ ಬರ್ತಿದ್ವಲ್ಲ?’

‘ಒಂದು ಡಜನ್ ಬಾಲ್ ತಗಂಬಂದೆ ಸರ್. ಹಂಗೇ ಒಂದು ಪ್ಯಾಕೆಟ್ ಚಾಕಲೇಟ್’

‘ಯಾರಿಗೆ?’

‘ಅಂದ್ರೆ ಮಕ್ಕಳು ಈ ಮೂರ್ನಾಲ್ಕು ದಿವಸದಿಂದ ಆಟ ಪಾಟ ಇಲ್ದೆ ಸುಂದಾಗಿರ್ತಾವ. ಅವರ ಆಟದ ಸಾಮಾನೆಲ್ಲ ಹೊಳ್ಯಾಗ ಹೊಡಕೊಂಡು ಹೋಗಿರ್ತಾವಲ್ರಿ. ಒಂದೊಂದು ಬಾಲ್ ಸಿಕ್ರೆ ಎಷ್ಟೋ ಖುಷಿಯಾಗ್ತಾರ ಅಂತ’

‘ಮತ್ತೆ ಚಾಕಲೇಟೇನು ನಮಗಂತ ತಂದ್ರೇನು ಸರ್?” ಅಂತ ಕಿಚಾಯಿಸಿದಳು ಗಂಗಮ್ಮ, ಫರ್ಜಾನಾನೂ ಜೊತೆಗೆ ದನಿಗೂಡಿಸಿದಳು. ‘ನಿಮಗೆ ಬಿಸಿಲೂರಿಗೆ ಹೋದ ಮ್ಯಾಲೆ ಐಸ್‌ಕ್ರೀಮ್ ಪಾರ್ಟಿ ಕೊಡ್ಸಮು ಮೇಡಂ. ಯಾರು ಬರ್ತಾರ್‍ರಿ ನಿಮ್ಮಂಗ, ದಾರಿನೇ ಇಲ್ದಿರ ಊರುಗಳಿಗೆ, ಅದೂ ಸೀರೆ ಬ್ರೆಡ್ ಹಂಚೋ ಕೆಲ್ಸಕ್ಕ. ಗ್ರೇಟ್. ಹ್ಯಾಟ್ಸಪ್ ಟು ಯು ಬೋತ್” ಎಂದ. ಅವರಿಬ್ಬರು ಧನ್ಯತಾಭಾವದಲ್ಲಿ ತಲೆ ಕೆಳಗೆ ಹಾಕಿದರು.

‘ಚಾಕಲೇಟ್ ಯಾರಿಗೆ ಅಂತ ಹೇಳಲೇ ಇಲ್ಲಲ ಸರ್’ ಎಂದು ನೆನಪಿಸಿದ ಅಬ್ದುಲ್.

‘ಏನಿಲ್ಲ ಸರ್, ಹುಡುಗ್ರಿಗೆ ಚಾಕೊಲೇಟ್ ಅಂದ್ರೆ ಇಷ್ಟ. ಚಿತ್ರಾನ್ನ, ಅನ್ನ ಬ್ಯಾಳೆ, ಬಿಸ್ಕೀಟು, ಬ್ರೆಡ್ ಎಲ್ಲರೂ ಇವೇ ಕೊಟ್ಟು ಕೊಟ್ಟು ಹೋಗಿರ್ತಾರ. ಸುಮ್ಮನೆ ಒಂದು ಸಣ್ಣ ಸಿಹಿ. ಹುಡುಗ್ರು ಖುಷಿಪಡ್ತಾರಂತ’ ಅಂದ. ಅವನ ಮಾತುಗಳು ಅರ್ಧ ಅರ್ಥಪೂರ್ಣವಾಗಿಯೂ ಮತ್ತರ್ಧ ಹುಡುಗುತನದವಾಗಿಯೂ ಕೇಳಿಸಿದರೂ ಅವನ ಉದ್ದೇಶದಲ್ಲಿ ಮಾತ್ರ ಪ್ರಾಮಾಣಿಕವಾದ ಕಳಕಳಿ ಎದ್ದು ಕಾಣಿಸಿತು ತಿಮೋತಿಗೆ. ‘ಗ್ರೇಟ್ ಸರ್’ ಅಬ್ದುಲ್ಲ ಹಿಂತಿರುಗಿ ಬಾಲಕೃಷ್ಣನ ಕೈಕುಲುಕಿದ.

ಒಂದು ಕ್ಷಣ ತಿಮೋತಿಗೆ ಯಾಕೋ ಗೊತ್ತಿಲ್ಲ ಒಳಗೊಳಗೆ ತನ್ನ ಬಗ್ಗೆ ಪಿಚ್ಚೆನಿಸಿತು. ಎರಡು ದಿನಗಳಿಂದ ಅವರಿವರಿಂದ ಅಬ್ದುಲ್ಲ ಕಾಡಿ ಬೇಡಿ ಫಂಡ್ಸ್ ಕಲೆಕ್ಟ್ ಮಾಡಿ ತಂದಿರುವ ಸಾಮಾನುಗಳನ್ನೇ ತಾನು ಹಂಚುತ್ತಿರುವುದೇ ಹೊರತು ತಾನು ಇದಕ್ಕೆ ಹತ್ತು ಪೈಸೆಯ ನೆರವನ್ನೂ ಸೇರಿಸಲಿಲ್ಲ, ಬಾಲಕೃಷ್ಣನಿಗೆ ಬಂದ ಆಲೋಚನೆ ತನಗೆ ಬರಲಿಲ್ಲವಲ್ಲ ಎಂದುಕೊಂಡ.

ಊರು ಹತ್ತಿರಾದುದನ್ನು ಕೊಳೆತ ವಾಸನೆ ಹಾಗೂ ನಿಂತ ನೀರಿನ ಮಲೆತ ವಾಸನೆಗಳು ಸಾರಿ ಹೇಳಿದವು. ಅಲ್ಲಾಗಲೇ ಹಿಂದುತ್ವದ ಸಂಘಟನೆಯವರು ಶಾಮಿಯಾನಾ ಹಾಕಿ ಅಲ್ಲೇ ಅನ್ನ ಸಾರು ಬೇಯಿಸುತ್ತಿದ್ದರು. ಊರಿನವರು ಸಣ್ಣ ಪುಟ್ಟ ಕೆಲಸಗಳಲ್ಲಿ ಸಹಾಯವಾಗುತ್ತಿದ್ದರು. ಒಬ್ಬ ವೈದ್ಯ ಭಾರತಮಾತೆಯ ಫೋಟೊವನ್ನು ಕುರ್ಚಿಯೊಂದರ ಮೇಲಿಟ್ಟು ಸ್ಟೆತಾಸ್ಕೋಪ್ ಕೊರಳಿಗೆ ಹಾಕಿಕೊಂಡು ಕ್ಯೂನಲ್ಲಿ ನಿಂತವರ ತಪಾಸಣೆ ಮಾಡುತ್ತಿದ್ದ. ಅವನ ಕಾಲ ಬುಡದಲ್ಲಿ ತುರ್ತು ಅಗತ್ಯದ ಮಾತ್ರೆಗಳ ಒಂದು ದೊಡ್ಡ ಡಬ್ಬಿಯೇ ಇತ್ತು.

**(ಸಶೇಷ)**